wed. 19th Sept 2010



ಬಾಗಲಕೋಟ ನವನಗರದ ಪ್ರಸನ್ನವೆಂಕಟದಾಸರ ವಂಶಸ್ಥರ ಮನೆಯಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ, ಧ್ರುವಾಚಾರ್ಯ ಕಾಖಂಡಕಿ, ರೇಖಾ ಕಾಖಂಡಕಿ ಮತ್ತಿತರರು ಇದ್ದರು.

# ಪ್ರಸನ್ನವೆಂಕಟ ದಾಸರ ಸಾಹಿತ್ಯ ವರ್ಣನಾತೀತ

▪ ವಿಕ ಸುದ್ದಿಲೋಕ ಬಾಗಲಕೋಟ

ಗ್ರಾಮೀಣ ಭಾಷೆಯಲ್ಲೇ ದಾಸ ಸಾಹಿತ್ಯಕ್ಕೆ ಅದ್ಭುತ ಕೊಡುಗೆ ನೀಡಿದ ಬಾಗಲಕೋಟೆಯ ಪ್ರಸನ್ನವೆಂಕಟ ದಾಸರ ಕುರಿತು ತಾವೇ ರಚಿಸಿದ ಕಾದಂಬರಿಯ ಕೊನೆಯ ಪುಟಗಳನ್ನು ಓದುತ್ತಿದ್ದಂತೆ ಭಾವುಕರಾದವರು ನಾಡಿನ ಖ್ಯಾತ ಸಾಹಿತಿ ರೇಖಾ ಕಾಖಂಡಕಿ.

ನವನಗರದ ಪ್ರಸನ್ನವೆಂಕಟದಾಸರ ವಂಶಸ್ಥರ ಮನೆಯಲ್ಲಿ ನಡೆದ ಪ್ರಸನ್ನವೆಂಕಟ ವಿಜಯ ಕಾದಂಬರಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿ, ಕೆಲವು ವರ್ಷಗಳ ಹಿಂದೆ ದಾಸರ ಪುಣ್ಯತಿಥಿಗೆ ಆಗಮಿಸಿದ್ದಾಗ ದಾಸರ ಜೀವನಾಧರಿತ ಕಾದಂಬರಿ ಬರೆಯಲು ನನಗೆ ಸ್ಫೂರ್ತಿ ಸಿಕ್ಕಿತ್ತು. ಅದು ಅವರ ಅನುಗ್ರಹವೇ ಸರಿ. ಅವರ ಪುಣ್ಯತಿಥಿ ಸಂದರ್ಭದಲ್ಲೇ ಈ ಕಾದಂಬರಿ ಬಿಡುಗಡೆಯಾಗುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ವಿದ್ವಾನ್ ಅರಳುಮಲ್ಲಿಗೆ ಪಾರ್ಥಸಾರಥಿ ಮಾತನಾಡಿ, ಬಡತನದ ಬೇಗೆಯಲ್ಲೇ ಬೆಂದ ಪ್ರಸನ್ನವೆಂಕಟ ದಾಸರು ತಮ್ಮ ಅಂತರಂಗ ಭಕ್ತಿಯಿಂದ ತಿರುಪತಿ ತಿಮ್ಮಪ್ಪನನ್ನು ಸಾಕ್ಷಾತ್ಕರಿಸಿಕೊಂಡವರು. ದೇವರ ದರ್ಶನ ಪಡೆದ ನಂತರ ಅವರು ಎದೆಯ ಕದ ತೆರೆದಾಗ ಪದಗಳ ಪ್ರವಾಹವೇ ಹರಿಯಿತು. ಬೆಳದಿಂಗಳ ಭಾಷೆಯಲ್ಲೇ ತತ್ತ್ವ ಜ್ಞಾನವನ್ನು ಪ್ರಸಾರ ಮಾಡಿದ ಅವರು ಘಟಪ್ರಭಾ ತೀರದ ಹಾಡುವ ಹಕ್ಕಿ ಎನಿಸಿದ್ದಾರೆ. ಅನೇಕ ವರ್ಷಗಳವರೆಗೆ ಗೆದ್ದಿಲುಗಳ ಆಹಾರವಾಗಿದ್ದ ಅವರ ಸಾಹಿತ್ಯ ಕೆಲವು ಸಾಹಿತಿಗಳಿಂದ ಬೆಳಕಿಗೆ ಬಂದದ್ದು ಸಂತಸದ ಸಂಗತಿ. ಮನೆ ಮನೆಗಳಲ್ಲಿ ಹಿರಿಯರು ಮಕ್ಕಳಿಗೆ ದಾಸರ ಬಗ್ಗೆ ತಿಳಿಸಿಕೊಡುವ ಕಾರ್ಯ ನಡೆಯಬೇಕಿದೆ. ಮುಂದಿನ ಪೀಳಿಗೆಗೆ ದಾಸರನ್ನು ಪರಿಚಯಿಸಲು ಇಲ್ಲೊಂದು ದಾಸರ ಪುತ್ಥಳಿ ನಿರ್ಮಾಣವಾಗಬೇಕು ಎಂದರು.

ಪ್ರಸನ್ನವೆಂಕಟ ದಾಸರ ಕುರಿತ ವೆಬ್‌ಸೈಟ್ ಬಿಡುಗಡೆಗೊಳಿಸಿದ ಸಾಹಿತಿ ಆನಂದ ಝುಂಜರವಾಡ ಮಾತನಾಡಿ, ದ್ವಂದ್ವವೇ ವಸಂತದ ಹಬ್ಬ ಎಂಬ ಪದದ ಮೂಲಕ ಬಾಗಲಕೋಟೆಯ ಹೋಳಿ ಹುಣ್ಣಿಮೆಯನ್ನು ಅದ್ಭುತವಾಗಿ ವರ್ಣಿಸಿದ ಪ್ರಸನ್ನವೆಂಕಟ ದಾಸರ ಸಾಹಿತ್ಯ ವರ್ಣನಾತೀತ. ಅವರ ಚರಿತ್ರೆ ಮೇಲೆ ಬೆಳಕು ಚೆಲ್ಲುವ ರೇಖಾ ಕಾಖಂಡಕಿ ಅವರ ಕಾದಂಬರಿಗೆ ಓದುಗರು ಸ್ಪಂದಿಸಿ ಸ್ಫೂರ್ತಿ ನೀಡಬೇಕು ಎಂದರು.

ಪಂ. ರಘೂತ್ತಮಾಚಾರ್ಯ ನಾಗಸಂಪಿಗೆ ಮಾತನಾಡಿ, ಮಧ್ವ ಸಿದ್ಧಾಂತ ಎಲ್ಲ ಕಾಲಕ್ಕೂ ಪ್ರಸ್ತುತವೆನಿಸಿದೆ. ವ್ಯಾಸ ಸಾಹಿತ್ಯವನ್ನೇ ಆಧಾರಾವಾಗಿಟ್ಟುಕೊಂಡು ರಚನೆಯಾದ ದಾಸ ಸಾಹಿತ್ಯ ಮುಕ್ತಿಗೆ ಸುಲಭ ಮಾರ್ಗವಾಗಿದೆ. ಅವಮಾನವನ್ನೇ ಸವಾಲಾಗಿ ಸ್ವೀಕರಿಸಿ ಭಗವಂತನನ್ನು ಕಂಡ ಪ್ರಸನ್ನವೆಂಕಟ ದಾಸರ ಜೀವನ ಪ್ರತಿಯೊಬ್ಬರಿಗೂ ಆದರ್ಶವಾಗಬೇಕು ಎಂದರು.

ಇದಕ್ಕೂ ಮೊದಲು ವೇದಘೋಷಗಳೊಂದಿಗೆ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಧ್ರುವಾಚಾರ್ಯ ಕಾಖಂಡಕಿ, ಗಾಯಕ ಅನಂತ ಕುಲಕರ್ಣಿ, ಸುಭಾಸ ಕಾಖಂಡಕಿ ಮತ್ತಿತರರು ಉಪಸ್ಥಿತರಿದ್ದರು.